<u>ದಿನಾಂಕಃ 13-07-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು</u>

<u>ಪಾಟೀ ಸವಾಲುಃ ಶ್ರೀ ಸಿ ಬಿ ವಿ ವಕೀಲರಿಂದಃ-</u>

ಕಾನೇಶುಮಾರಿ ನಂಬರಿನಲ್ಲಿ ನಮ್ಮ ಕುಟುಂಬದ ಒಂದೇ ನಂಬರ್ ಇದೆ ಎಂದರೆ ಸರಿಯಲ್ಲ. ಸಿದ್ದರಾಮಪ್ಪ ಬಿನ್ ಕರಿಯಪ್ಪನವರಿಂದ 2 ನೇ ಪ್ರತಿವಾದಿಯ ಮುತ್ತಜ್ಜ ಬಸಪ್ಪ ನವರು ಖರೀದಿಸ್ದಿದರು ಎಂದರೆ ಸಾಕ್ಷಿ ದಾಖಲೆ ನೋಡಬೇಕೆನ್ನುತ್ತಾರೆ. ಸದರಿ ಆಸ್ತಿಯ ಪಶ್ಚಿಮಕ್ಕಿರುವ ಒಂದು ಆಸ್ತಿಯನ್ನು 2 ನೇ ಪ್ರತಿವಾದಿಯ ಅಜ್ಜ ಮರುಳಪ್ಪ ಖರೀದಿಸಿದ್ದಾರೆಂದರೆ ಸಾಕ್ಷಿ ದಾಖಲೆ ನೋಡದೇ ಗೊತ್ತಾಗುವುದಿಲ್ಲ ಅನ್ನುತ್ತಾರೆ. ಪ್ರತಿವಾದಿ 2 ರವರಿಗೆ ಸೇರಿದ 4 ಆಸ್ತಿಗಳು ಒಂದರ ಪಕ್ಕದಲ್ಲಿ ಒಂದರಂತೆ ಇರುತ್ತವೆಂದರೆ ಗೊತ್ತಿಲ್ಲ. ಅವುಗಳ ನಂಬರ್ 258/1, 259, 260, 261 ಆಗಿರುತ್ತವೆಂದರೆ ಸಾಕ್ಷಿದಾರರು 261 ಅವರ ಆಸ್ತಿ ಆಗಿಲ್ಲ ಅನ್ನುತ್ತಾರೆ. ಪೂರ್ವ-ಪಶ್ಚಿಮ 17 ಗಜ ಇಂಟು ಉತ್ತರ-ದಕ್ಷಿಣ 50 ಗಜ ಬಂದಿದೆ ಎಂದು ತೋರಿಸಲು ಏನು ದಾಖಲೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ನೊಂದಾಯಿತ ವಿಭಾಗ ಪತ್ರ ಕೊಟ್ಟಿದ್ದೇನೆನ್ನುತ್ತಾರೆ. ಸದರಿ ವಿಸ್ತೀರ್ಣವನ್ನು 1957-58 ರ ಗ್ರಾಮಪಂಚಾಯ್ತಿಯ ದಾಖಲೆಗಳ ಮೇಲೆ ಬರೆದಿರಬಹುದು. ನಾನು 1957-58 ರ ಅಸೆಸ್ ಮೆಂಟ್ ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಈಗಲೂ ಸಿಕ್ಕಿದರೆ ಹಾಜರು ಮಾಡುತ್ತೇನೆ. ಅಸೆಸ್ ಮೆಂಟ್ ನಂಃ 261 ಪೂರ್ವ-ಪಶ್ಚಿಮ 30 ½ ಉತ್ತರ-ದಕ್ಷಿಣ 177 ಅಡಿ ಗಳು 2 ನೇ ಪ್ರತಿವಾದಿ ಕುಟುಂಬದ ಸೇರಿದ ಆಸ್ತಿ ಎಂದರೆ ಸುಳ್ಳು, ಸರಿಯಲ್ಲ. ಸದರಿ ಆಸ್ತಿಯನ್ನು 262 ರ ಅಸೆಸ್ ಮೆಂಟ್ ನಂಬರಿಗೆ ಸೇರಿಸಿಕೊಂಡು ನಮೂದು ಮಾಡಿದ್ದಾರೆಂದರೆ ಸರಿಯಲ್ಲ. ಆ ರೀತಿ ಪಂಚಾಯ್ತಿಯವರು ತಪ್ಪು ಮಾಡಿದ್ದಾರೆಂದರೆ ಸರಿಯಲ್ಲ.

ಆ ರೀತಿ ತಪ್ಪಾಗಿ ನಮೂದಾಗಿರುವುದು ಹೆಚ್ ಎಂ ಚಂದ್ರಶೇಖರಪ್ಪ ನವರ ಹೆಸರಿಗೆ ನಮೂದಾಗಿದೆ ಎಂದರೆ ಸಾಕ್ಷಿ ತಪ್ಪಾಗಿ ನಮೂದಾಗಿದೆ ಅನ್ನುತ್ತಾರೆ. ಸಾಕ್ಷಿ ಮುಂದುವರೆದು ಸದರಿ ಚಂದ್ರಶೇಖರಪ್ಪ ನಮ್ಮ ದೊಡ್ಡಪ್ಪ ಅನ್ನುತ್ತಾರೆ. ಅದೇ ಕಾರಣಕ್ಕೆ ನಮ್ಮ ದೊಡ್ಡಪ್ಪ ಚಂದ್ರಶೇಖರಪ್ಪ ನವರು 2 ನೇ ಪ್ರತಿವಾದಿ ತಂದೆ ಚಂದ್ರಪ್ಪ ನವರಿಗೆ 30 ½ ಇಂಟು 177 ಅಡಿಗಳಿಗೆ ವಿಲ್ ನಾಮೆ ಬರೆದುಕೊಟ್ಟಿದ್ದಾರೆಂದರೆ ಸಾಕ್ಷಿ ನಮ್ಮ ತಂದೆ ಆಸ್ತಿಯನ್ನು ವಿಲ್‌ನಾಮೆ ಮೂಲಕ ನಮ್ಮ ದೊಡ್ಡಪ್ಪನು ಚಂದ್ರಪ್ಪನಿಗೆ ಕೊಡಲು ಅದಿಕಾರ ಇಲ್ಲ ಅನ್ನುತ್ತಾರೆ. ಅಸೆಸ್ ಮೆಂಟ್ 262 ಸಾಹುಕಾರ್ ರುದ್ರಪ್ಪನವರ ಕುಟುಂಬಕ್ಕೆ ಸೇರಿರುತ್ತದೆಂದರೆ ಸಾಕ್ಷಿ

ಸದರಿ ಸಾಹುಕಾರ್ ರುದ್ರಪ್ಪ ನಮ್ಮ ಇನ್ನೊಬ್ಬ ದೊಡ್ಡಪ್ಪ ಅನ್ನುತ್ತಾರೆ. ಮುಂದುವರೆದು ಅಸೆಸ್ ಮೆಂಟ್ 261, 262 ನಮ್ಮ ತಂದೆಗೆ ಸೇರಿದ್ದು ಅನ್ನುತ್ತಾರೆ. ದಾವಾಆಸ್ತಿಗೆ ನಾನು ಮಾಲೀಕನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ನನ್ನ ದೊಡ್ಡಪ್ಪನ ಮಗ ಆಗಿರುತ್ತಾರೆ. ಪ್ರತಿವಾದಿ 2 ರಿಂದ 9 ರವರು ಪ್ರತಿವಾದಿ 1 ರವರ ಜೊತೆ ಚೆನ್ನಾಗಿದ್ದಾರೆಂದರೆ ಗೊತ್ತಿಲ್ಲ. ಅದೇ ಕಾರಣಕ್ಕೆ ಅವರಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ.